# ಚಿತ್ತಾಕರ್ಷಕ 'ಚಿತ್ತಾರ'





ಚಿತ್ತಾರ.. ಇದು ಅಪ್ಪಟ ಗ್ರಾಮೀಣ ಸೊಗಡಿನ ವಿಶಿಷ್ಟ ಕಲೆ. ಬಟ್ಟೆ ಮೇಲೆ, ಬುಟ್ಟಿ ಮೇಲೆ, ಬಾಗಿಲು ಮೇಲೆ ಚಿತ್ತಾರ ಕಲೆಗಳು ಪಡಿಮೂಡಿತೆಂದರೆ ಅದು ನೋಡಲು ಚಿತ್ತಾಕರ್ಷಕ.

ಶಿವಮೊಗ್ಗ ಜಿಲ್ಲೆ ಸಾಗರದ ಲಕ್ಷ್ಮವ್ವ ಚಿತ್ತಾರ ಕಲೆಯಲ್ಲಿ ಪಳಗಿದ್ದು, ಸದ್ಯ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಚಿತ್ತಾರ ಕಲಾವಿದೆ. ಈ ಗ್ರಾಮ್ಯ ಕಲೆಯನ್ನು ನಗರದಲ್ಲಿಯೂ ಗಮನ ಸೆಳೆಯುವಂತೆ ಮಾಡಿದ ಅಪರೂಪದ ಕಲಾವಿದೆ ಲಕ್ಷ್ಮವ್ವ.

ಲಕ್ಷ್ಮವ್ವಗೆ ಜೀವನವೇ ಒಂದು ಹಬ್ಬ. ಅದು ಕಲೆಯನ್ನು ಆರಾಧಿಸುವ, ಆಸ್ವಾದಿಸುವ, ಸಂಭ್ರಮಿಸುವ, ಕಲೆಗಾರಿಕೆಯಲ್ಲೇ ತೊಡಗಿಸಿಕೊಳ್ಳುವ ಹಬ್ಬ. ಶಿವಮೊಗ್ಗದ ದೀವರು ಜನಾಂಗದ ಜನರೇ ಹೆಚ್ಚಾಗಿ ಮಾಡುವ ಚಿತ್ತಾರ ಕಲೆ ಲಕ್ಷ್ಮವ್ವಗೆ ಕರತಲಾಮಲಕ. ಬುಟ್ಟಿಯ ಮೇಲೆ, ಗೋಡೆಯ ಮೇಲೆ ಸೂಕ್ಷ್ಮ ಕುಸುರಿ ಕೆಲಸ ಆಕೆಗೆ ಸಲೀಸು. ಶಿವಮೊಗ್ಗ, ಸಾಗರ ಕಡೆಯ ಹಳ್ಳಿಗಳಲ್ಲಿ ಚಿತ್ತಾರ ಕಲೆ ಸಾಮಾನ್ಯವಾಗಿ ಕಾಣಸಿಗುತ್ತದೆ. ಮನೆಯಲ್ಲಿ ನಡೆಯುವ ನಾಮಕರಣ, ನಿಶ್ಚಿತಾರ್ಥ, ಮದುವೆಗಳಂತಹ ಶುಭ ಕಾರ್ಯಗಳಲ್ಲಿ, ಭೂಮಿ ಹುಣ್ಣಿಮೆ ಸಂದರ್ಭದಲ್ಲಿ ಚಿತ್ತಾರ ಕಲೆಯ ಪ್ರದರ್ಶನ ಹೆಚ್ಚು. ಆರತಿ ಬೆಳಗುವ ತಟ್ಟೆ, ಇತರೇ ಬಳಕೆಗಾಗಿರುವ ಮಡಕೆಗಳು, ಗೋಡೆಯ ಅಲಂಕಾರ.. ಒಟ್ಟಿನಲ್ಲಿ 'ದೀವರು' ಜನಾಂಗದ ಮನೆಗಳಲ್ಲಿ ಏನೇ ಕಾರ್ಯಕ್ರಮ ನಡೆದರೂ ಚಿತ್ತಾರದಿಂದ ಪಡಿಮೂಡಿದ ವಸ್ತುಗಳು ಬೇಕೇ ಬೇಕು ಎನ್ನುವಷ್ಟು ಜನಪ್ರಿಯ.

ಹಾಗೆ ನೋಡಿದರೆ ಚಿತ್ತಾರ ಕಲೆ ಹೊಸದೇನೂ ಅಲ್ಲ. ಪುರಾತನ ಕಾಲದಿಂದಲೂ 'ಹಸೆ–ಗೋಡೆ' ಸಂಸ್ಕೃತಿ ಇಟ್ಟುಕೊಂಡಿದ್ದ ಜನ ಇದನ್ನು ಬಳಸುತ್ತಲೇ ಬಂದಿದ್ದಾರೆ. ಲಕ್ಷ್ಮವ್ವ ಪ್ರಕಾರ ಈ ಚಿತ್ತಾರ ಕಲೆ ಯಾರಿಂದಲೂ ಕಲಿತು ಬರುವುದಲ್ಲ. ತಾಯಿ, ಅಜ್ಜಿಯರು ಮಾಡುತ್ತಿದ್ದ ಕಲೆಯನ್ನು ನೋಡಿ ನೋಡಿ ಕಲಿತಿರುವುದು. ಸತತ ಅಭ್ಯಾಸದಿಂದ ಚಿತ್ತಾರ ಕಲೆಯಲ್ಲಿ ಪರಿಪೂರ್ಣತೆ ಸಾಧಿಸಬಹುದು ಎನ್ನುತ್ತಾರೆ ಅವರು.

ಚಿತ್ತಾರ ಕಲೆಯಲ್ಲಿ ಅಡ್ಡಗೆರೆ, ಉದ್ದಗೆರೆಗಳು ಇಂತಿಷ್ಟೇ ಬರಬೇಕು ಎಂಬ ನಿಯಮವಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕಲೆಯನ್ನು ಮಾಡಬೇಕು. ಆದರೆ ಈ ಜನಾಂಗದಲ್ಲಿ ಅನೇಕರು ಅನಕ್ಷರಸ್ತರೇ ಆಗಿದ್ದರೂ ಎಲ್ಲೇ, ಯಾರೇ ಮಾಡಿದರೂ ಲೆಕ್ಕ ತಪ್ಪುವುದಿಲ್ಲ ಎಂದು ವಿವರಿಸುತ್ತಾರೆ ಲಕ್ಷ್ಮವ್ವ.

ಚಿತ್ತಾರ ಕಲೆ ನೋಡಲು ಆಕರ್ಷಕ, ಸುಂದರ. ಆದರೆ ಇದನ್ನು ಮಾಡಲು ತಾಳ್ಮೆ ಬೇಕು, ಕಲೆ ಮಾಡಲು ಆರಂಭಿಸಿದ ಮೇಲೆ ಅದು ಮುಗಿಯಲು ಸಾಕಷ್ಟು ಸಮಯವೂ ಬೇಕು.

## ಚಿತ್ತಾರ ಬಿಡಿಸುವುದು ಹೇಗೆ?

ಬುಟ್ಟಿ ಮೇಲೆ ಚಿತ್ತಾರ ಕಲೆ ಮಾಡಲು ಅನೇಕ ಹಂತಗಳಿವೆ. ಮೊದಲು ಬುಟ್ಟಿಯ ನಾಲ್ಕು ಬದಿಗಳನ್ನು ನಯಗೊಳಿಸಿ ಸೆಗಣಿ ಹಚ್ಚಿ ಒಣಗಿಸಿ. ಅದನ್ನು ಮತ್ತೆ ಉಜ್ಜಿ ಉಜ್ಜಿ ನಯಗೊಳಿಸಿ 2–3 ಕೋಟ್ ಸೆಗಣಿ ಹಚ್ಚಿ ಒಣಗಿಸಿ. ಇದರ ಮೇಲೆ ಕೆಮ್ಮಣ್ಣು ಅನ್ನು ನೀರಿನಲ್ಲಿ ಕಲಸಿ ಹಚ್ಚಿ ಒಣಗಲು ಬಿಡಿ. ಇದನ್ನು ಎರಡು ಸಲ ಹಚ್ಚಬೇಕು. ಚಿತ್ತಾರ ಬಿಡಿಸಲು ಅಕ್ಕಿಯನ್ನು ಮೂರು ದಿನ ನೆನೆಸಿ ನಂತರ ಬೀಸಿ ಹಿಟ್ಟು ಮಾಡಿ ಸ್ವಲ್ಪವೇ ನೀರು ಹಾಕಿ ಬೇಯಿಸಿ ಪೇಸ್ಟ್ ತರ ಮಾಡಿ ಬುಟ್ಟಿ ಮೇಲೆ ನಾಜೂಕಾಗಿ ಚಿತ್ತಾರ ಬಿಡಿಸಬೇಕು. ಇದನ್ನು ಬಿಸಿಲಿನಲ್ಲಿ ಒಣಗಿಸಿದರೆ ಚಿತ್ತಾಕರ್ಷಕ ಚಿತ್ತಾರ ಕಲೆ ಸಿದ್ಧ.

ಹಳದಿ ಬಣ್ಣ ಬೇಕಿದ್ದರೆ ಅಮಟೆ, ನುಗ್ಗೆ, ಮುರುಗಲು ಮರದ ಅಂಟು ತೆಗೆದು ಅಕ್ಕಿಹಿಟ್ಟಿನೊಂದಿಗೆ ಬೆರೆಸಬಹುದು. ಕೆಂಪು ಬಣ್ಣಕ್ಕೆ ಕೆಮ್ಮಣ್ಣು ಸೂಕ್ತ. ಕಪ್ಪು ಬಣ್ಣಕ್ಕೆ ಅಕ್ಕಿಯನ್ನು ಚೆನ್ನಾಗಿ ಹುರಿದುಕೊಂಡು ಹಿಟ್ಟು ಮಾಡಿದರಾಯಿತು. 'ಗುರಿಗೆ' ಬೀಜ ಬಳಸಿಯೂ ಹಳದಿ ಬಣ್ಣ ತಯಾರಿಸಬಹುದು. ನೈಸರ್ಗಿಕವಾದ ತಾಜಾ ಬಣ್ಣವೂ ಸಿಗುತ್ತದೆ. ಚಿತ್ತಾರ ಕಲೆಯನ್ನೂ ಮಾಡಬಹುದು. ಈ ಬಣ್ಣವನ್ನು 'ಪುಂಡಿ ನಾರು' ಸಹಾಯದಿಂದ ಬ್ರಷ್ ತರಹ ಬಳಸಿ ಮಾಡಲಾಗುತ್ತದೆ ಎಂದು ವಿವರಿಸುತ್ತಾರೆ ಲಕ್ಷ್ಮವ್ವ.

ಸರ್ಕಾರೇತರ ಸ್ವಯಂಸೇವಾ ಸಂಸ್ಥೆ ಸಿಎಫ್ಆರ್ಐಎ ಇತ್ತೀಚೆಗೆ ಲಕ್ಷ್ಮವ್ವ ಅವರನ್ನು ಚಿತ್ತಾರ ಕಲೆ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಡುವ ಸಲುವಾಗಿ ಬೆಂಗಳೂರಿಗೆ ಆಹ್ವಾನಿಸಿತ್ತು. ಈ ಸಂದರ್ಭದಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡರು ಲಕ್ಷ್ಮವ್ವ.

ಇದೀಗ ಚಿತ್ತಾರ ಕಲೆ ಶಿವಮೊಗ್ಗ ಗಡಿ ಅಷ್ಟೇ ಏಕೆ, ನಮ್ಮ ದೇಶದ ಗಡಿಯನ್ನೂ ದಾಟಿದೆ. ವಿದೇಶದಲ್ಲೂ ಸಾಕಷ್ಟು ಬೇಡಿಕೆ ಬಂದಿದೆ. ಬಟ್ಟೆ ಅಷ್ಟೇ ಅಲ್ಲ ಪೇಪರ್ ಮೇಲೂ ಚಿತ್ತಾರ ಕಲೆ ಪಡಿಮೂಡಿದೆ. ಕಂಪ್ಯೂಟರ್‌ನಲ್ಲಿ ಚಿತ್ತಾರ ಕಲೆಯನ್ನು ಮಾಡಬಹುದಾದರೂ ನೈಸರ್ಗಿಕವಾದ ಉತ್ಪನ್ನ ಬಳಸಿ ಕೈಯಿಂದ ಮಾಡುವ ಕಲೆಗೇ ಬೇಡಿಕೆ ಹೆಚ್ಚು ಎನ್ನುತ್ತಾರೆ ಲಕ್ಷ್ಮವ್ವ.

■ ಉಮಾ ವೇಣೂರು

